


# ಹೀಗೂ ಉಂಟು ಸರ್ಕಾರಿ ಶಾಲೆ!


ಮುಖ್ಯ ಶಿಕ್ಷಕಿ ಹರ್ಷಿಣಿ

**ಖಾಸಗಿ ಶಾಲೆಗಳಲ್ಲಿ ಸೀಟು ಪಡೆಯಲು ನೂಕು ನುಗ್ಗಲು ಕೇಳಿದ್ದೀರಿ. ಆದರೆ ಸರಕಾರಿ ಶಾಲೆಯಲ್ಲೂ ಸೀಟು ಪಡೆಯಲು ಪ್ರಭಾವ ಬೀರುವುದು ಗೊತ್ತೆ? ಕಾರ್ಕಳದ ಈ ಸರಕಾರಿ ಪ್ರೌಢಶಾಲೆ ಅಷ್ಟೊಂದು ಕೀರ್ತಿ ಗಳಿಸಿದೆ. ರಾಜ್ಯಕ್ಕೇ ಮಾದರಿಯಾಗಿ ಮೆರೆದಿದೆ.**

★ ಕೆ. ಪದ್ಮಾಕರ ಭಟ್
ಚಿತ್ರ: ದ್ವಾರ್ಕಾ ನಿರಂಜನ್

ಇಲ್ಲಿ ಮಕ್ಕಳ ಮನದಲ್ಲಿ ಅಳುಕಿಲ್ಲ. ಏಕೆಂದರೆ ಮಕ್ಕಳ ಮನಸ್ಸು ಅರಿತು ನಡೆದುಕೊಳ್ಳುವವರು ಇಲ್ಲಿದ್ದಾರೆ. ಕಲಿಕೆ ಕಷ್ಟವೆಂದು ಇಲ್ಲಿ ತಲೆಬಾಗುವವರು ಇಲ್ಲ. ಯಾಕೆಂದರೆ ಇಲ್ಲಿ ವಿದ್ಯೆಯ ತಿಳಿವಿಗೆ ತೊಡಕು ಇಲ್ಲ. ಇಲ್ಲಿ ಮಕ್ಕಳು ತಲೆಬಾಗಿ ಕಲಿಯುತ್ತಾರೆ. ಅದಕ್ಕೇ ತಲೆಯೆತ್ತಿ ನಡೆಯುತ್ತಾರೆ. 'ನಮ್ಮ ಮಕ್ಕಳು ಯಾರಿಗೇನೂ ಕಡಿಮೆಯಿಲ್ಲ' ಎಂದು ಶಿಕ್ಷಕವೃಂದ ಬೀಗುತ್ತಿದೆ.

ಸರಕಾರಿ ಶಾಲೆ ಎಂದಾಗ ಒಂದು ರೀತಿಯ ಜನ ಮೂಗು ಮುರಿವ ಮನೋಸ್ಥಿತಿ ಬೆಳೆದಿರುವ ಈ ಕಾಲದಲ್ಲಿ ಉಡುಪಿ ಜಿಲ್ಲೆಯ ಕಾರ್ಕಳದ ಸರ್ಕಾರಿ ಶಾಲೆಯೊಂದು ಜನರ ಅನಾಸಕ್ತಿ, ಅಪವಾದಗಳನ್ನು ಮೆಟ್ಟಿ ಮೇಲೇರಿ ನಿಂತಿದೆ.

ಈ ಶಾಲೆ ಮುಖದ್ವಾರ ಪ್ರವೇಶಿಸುತ್ತಿದ್ದಂತೆ 'ಬಾಗಿಲೊಳು ಕೈ ಮುಗಿದು ಒಳಗೆ ಬರುವ' ಭಾವ ಎದೆಯಿಂದ ಎದ್ದು ಬರುತ್ತದೆ. ಲಭ್ಯ ಪರಿಕರ ಸಂಪನ್ಮೂಲಗಳಷ್ಟನ್ನೇ ಬಳಸಿ ಸ್ವಚ್ಛ – ಸುಂದರ ಮತ್ತು ಒಪ್ಪ ಓರಣದ ಶಾಲಾ ಪರಿಸರ ನಿರ್ಮಿಸಿರುವುದು ಇದಕ್ಕೆ ಕಾರಣ.

ಸರಕಾರಿ ಶಾಲೆ ಎಂದಾಗ ಮೂಗು ಮುರಿಯುವ ಇಂದಿನ ದಿನಗಳಲ್ಲಿ ಸರಕಾರಿ ಶಾಲೆಯನ್ನೇ ದೇಗುಲವಾಗಿ ಕಂಡು ಅಪರೂಪಕ್ಕೆ ದೊರಕುವ ಮಾನವ ಬದುಕಲ್ಲಿ ಸಾರ್ಥಕತೆ ಕಾಣುವ ಶಿಕ್ಷಕರ – ವಿದ್ಯಾಭಿಮಾನಿಗಳ ತಂಡವೊಂದು ಇಲ್ಲಿ ಕೆಲಸ ಮಾಡುತ್ತಿದೆ. ಕುಶಲ ವಿಚಾರಿಸುತ್ತಲೇ ಶಾಲೆ, ಮಕ್ಕಳು, ಶಿಕ್ಷಣ, ಶಾಲೆಯ ಅವಶ್ಯಕತೆಗಳತ್ತ ಮಾತುಗಳು ಹರಿಯುತ್ತವೆ. ಮಕ್ಕಳ ಕಲಿಕೆ, ಸಾಧನೆ, ಸಂವೇದನೆಗಳ ವಿವರಗಳು ಬಿಚ್ಚಿಕೊಳ್ಳುತ್ತವೆ. ಶಾಲೆಗೆ ಒಂದು ಸುತ್ತು ಹೊಡೆಸಿ ಶಾಲೆಯನ್ನು ಹೇಗೆ ಇಟ್ಟಿದ್ದೇವೆ ಎನ್ನುವುದನ್ನು ಮೌನದ ಮಾತಿನಲ್ಲೇ ತಿಳಿಸುತ್ತಾರೆ. ಆಗಾಗ ಬರುತ್ತಿರಿ, ಸಲಹೆ,